# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-03

Cw-03

ಸಾಕ್ಷಿದಾರರ ಹೆಸರುಃ ಶ್ರೀ ಚಂದ್ರಪ್ಪ ಹೆಗ್ಗಣ್ಣನವರ

ತಂದೆಃಗಂಡನ ಹೆಸರುಃ ಶ್ರೀ ಗುಡ್ಡಪ್ಪ

ವಯಸ್ಸುಃ 41 ವರ್ಷ

ಉದ್ಯೋಗಃ ಕೃಷಿ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ 5-6 ತಿಂಗಳ ಹಿಂದೆ ಒಂದು ದಿನ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ರಾಣೇಬೆನ್ನೂರಿನ ಪೊಲೀಸರು ನಮ್ಮೂರಿನ ಗ್ರಾಮ ಪಂಚಾಯತಿ ಕಚೇರಿ ಹತ್ತಿರ ಬಂದಿದ್ದರು. ಸದರಿ ಜಾಗದಲ್ಲಿ ಆರೋಪಿತರು ಮತ್ತು ಪಿರ್ಯಾದಿ ನಡುವೆ ಜಗಳ ಆಗಿತ್ತು. ಸದರಿ ಪೊಲೀಸರು ನನ್ನನ್ನು ಮತ್ತು ಶಿವಪ್ಪರವರನ್ನು ಪಂಚಾಯತಿ ಜಾಗಕ್ಕೆ ಕರೆಸಿದರು. ಆಗ ನಾವಿಬ್ಬರು ಅಲ್ಲಿಗೆ ಹೋದೆವು. ಆಗ ಪೊಲೀಸರು ಗುಡ್ಡಪ್ಪ ತೋರಿಸಿದ ಗ್ರಾಮ ಪಂಚಾಯತಿ ಜಾಗವನ್ನು ಪರಿಶೀಲಿಸಿ, ಸ್ಥಳ ಪಂಚನಾಮೆ ಜರುಗಿಸಿ, ಪೋಟೋ ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-4 ರಿಂದ 9 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

2. ನಮ್ಮೂರಿನ ಗ್ರಾಮ ಪಂಚಾಯತಿ ಜಾಗವು ಹನುಮಂತ ದೇವರ ಗುಡಿ ಹತ್ತಿರ ಇರುತ್ತದೆ. ಪೊಲೀಸರು ನನ್ನನ್ನು ಮತ್ತು ಚಾಸಾ-2-ಶಿವಪ್ಪ ರವರನ್ನು ಪ್ರಕರಣದ ಬಗ್ಗೆ

ಮಾಹಿತಿಯನ್ನು ಕೇಳಿದರು. ನನ್ನ ಮನೆ ಬಸ್ ನಿಲ್ದಾಣದ ಹತ್ತಿರ ಇರುತ್ತದೆ. ಚಾಸಾ-2 ರವರ ಮನೆ ಊರಿನ ಒಳಗಡೆ ಇರುತ್ತದೆ. ಪೊಲೀಸರು ಇಂತಹ ದಿನ ಗ್ರಾಮಕ್ಕೆ ಬರುತ್ತೇವೆಂದು ಹೇಳಿ ನಮಗೆ ಲಿಖಿತ ನೋಟೀಸನ್ನು ಕೊಟ್ಟಿರಲಿಲ್ಲ.

3. ಗ್ರಾಮ ಪಂಚಾಯತಿ ಜಾಗವು ರಾಜ್ಯಪಾಲರ ಹೆಸರಿನಲ್ಲಿರುತ್ತದೆ. ಆದರೆ ಆರೋಪಿತರು ಸದರಿ ಜಾಗ ನಮಗೆ ಸೇರಿದೆ ಎಂದು ಹೇಳಿ ಗ್ರಾಮ ಪಂಚಾಯತಿ ಅಧಿಕಾರಿಗಳ ಮೇಲೆ ರಾಣೇಬೆನ್ನೂರು ಸಿವಿಲ್ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳನ್ನು ಹಾಕಿದ್ದಾರೆ ಎಂದರೆ ನಿಜ. ಗುನ್ಹೆ ಜಾಗಕ್ಕೂ ಮತ್ತು ಪಂಚಾಯತಿ ಕಟ್ಟೆಗೂ ¼ ಕಿ.ಮೀ ಅಂತರ ಇರುತ್ತದೆ. ಜಗಳ ಆದ ದಿನ ನಾನು ಇರಲಿಲ್ಲ.

4. ನಾನು ಸಹಿ ಮಾಡಿದ ದಾಖಲಾತಿಯನ್ನು ಪೊಲೀಸರು ನನಗೆ ಓದಿ ಹೇಳಿದರು. ಸದರಿ ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪಂಚನಾಮೆಗೆ ಮಧ್ಯಾಹ್ನ 2.00 ಗಂಟೆಗೆ ಬಂದಿದ್ದರು. ಆದರೆ ದಿನಾಂಕ ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಪೊಲೀಸರು ಪಂಚನಾಮೆ ಮುಗಿಸುವಷ್ಟರಲ್ಲಿ ಮಧ್ಯಾಹ್ನ 3.00 ಗಂಟೆಯಾಗಿತ್ತು. ಸದರಿ ದಾಖಲಾತಿಗೆ ಸಾಕ್ಷಿಗೆ 2.00-3.00 ಗಂಟೆಯ ಒಳಗಡೆ ಸಹಿ ಮಾಡಿದ್ದಾರೆ ಎಂದರೆ ನಿಜ. ನಾನು ಸ್ಥಳ ಪಂಚನಾಮೆಗೆ ಮಧ್ಯಾಹ್ನ 3.15 ರಿಂದ 4.00 ಗಂಟೆ ನಡುವೆ ಸಹಿ ಮಾಡಿಲ್ಲ ಎಂದರೆ ನಿಜ. ಚಾಸಾ-2 ರವರೂ ಸಹ ಸ್ಥಳ ಪಂಚನಾಮೆಗೆ ಮಧ್ಯಾಹ್ನ 3.15 ರಿಂದ 4.00 ಗಂಟೆ ನಡುವೆ ಸಹಿ ಮಾಡಿಲ್ಲ ಎಂದರೆ ನಿಜ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.